ಹೊಂದಾಣಿಕೆ ಮಾಡಿಕೊಂಡಿದ್ದಾರೆ, ಅದರ ಷರತ್ತುಗಳೇನು, ನಮ್ಮ ಪರಿಸ್ಥಿತಿ ಏನು, ಕರ್ನಾಟಕದ ಜನ ದೇಶದ ಜನ ಎಷ್ಟು ಪಾತಾಳಕ್ಕೆ ಹೋಗುತ್ತಾರೆ ಇವೆಲ್ಲವೂ ಕೂಡ ಗೊತ್ತಾಗಬೇಕಾಗುತ್ತದೆ. ಆದ್ದರಿಂದ ಸರ್ಕಾರದ ನೀತಿಯ ಮತ್ತು ಇವರು ಬಹು ರಾಷ್ಟ್ರೀಯ ಕಂಪನಿಗಳ ಜೊತೆ ಮಾಡಿಕೊಂಡಿರುವ ನೀತಿಯನ್ನು ವಿರೋಧಿಸಿ ಮತ್ತು ಇದರ ಬಗ್ಗೆ ಸರ್ಕಾರ ಪ್ರಾಮಾಣಿಕವಾದ ಉತ್ತರವನ್ನು ಕೊಡುವುದಕ್ಕೆ ಆಗಲಿಲ್ಲವೆಂದು ಹೇಳಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಬಹಳ ನೋವಿನ ಪ್ರಸಂಗ ಇದು ಒಳ್ಳೆಯದಲ್ಲ.

(ಈ ಹಂತದಲ್ಲಿ ಸರ್ಕಾರದ ನೀತಿಯನ್ನು ವಿರೋಧಿಸಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗವನ್ನು ಮಾಡಿದರು)

ದ.ಕನ್ನಡ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ.

26 - ಡಾ|| ಚಿತ್ತರಂಜನ್ (ಭಟ್ಕಳ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯಲ್ಲಿ 1995-96ರ ಸಾಲಿನಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ಘಟಕ ಸ್ಥಾಪಿಸಲಾಗಿದೆಯೇ ಹಾಗಿದ್ದರೆ ವಿವರ ನೀಡುವುದು!*

ಆ) *ಹಾಗಿಲ್ಲದಿದ್ದಲ್ಲಿ 1995-96ರ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಯೋಜನೆ ಇದೆಯೇ?*

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಇಲ್ಲ

ಆ) ಸಿಂಗಲ್ ವಿಂಡೋ ಏಜೆನ್ಸಿ ಮತ್ತು ಉನ್ನತ ಮಟ್ಟದ ಸಮಿತಿಯು ಕೆಲವು ಪ್ರಸ್ತಾವನೆಗಳನ್ನು ಅನುಮೋದಿಸಿದ್ದು ಈ ಯೋಜನೆಗಳ ಕಾರ್ಯಾರಂಭ 1996-97ರಲ್ಲಿ ಪ್ರಾರಂಭವಾಗುವ ನಿರೀಕ್ಷೆಯಿದೆ.

ಡಾ|| ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಶ್ರೀ ದೇಶಪಾಂಡೆಯವರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಆಗಿದ್ದಾರೆ. ಅವರು ಜಿಲ್ಲೆಗೆ ಬೃಹತ್ ಕೈಗಾರಿಕೆಗಳನ್ನು ತರದೇ ಇದುದ್ದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಇದರ ಜೊತೆಗೆ ನಾನು ಕೇಳಬೇಕಾಗಿರುವ ಪ್ರಶ್ನೆಯೆಂದರೆ, ಈ ಕಾಳೀ ಪುನರ್ವಸತಿಯಿಂದ ಹಿಡಿದು ಸೀಬರ್ಡ್ ಕೊಡಸಳ್ಳಿ ಈ ರೀತಿಯ ಎಲ್ಲಾ ಪುನರ್ವಸತಿ ಯೋಜನೆಗಳು ಇನ್ನೂ ಕೂಡ ಪೂರ್ಣವಾಗಿಲ್ಲ. ಈ ಹಿನ್ನಲೆಯಲ್ಲ ನನಗೆ ಅವರಿಂದ ಸ್ಪಷ್ಟ ಭರವಸೆ ಬೇಕು. ಈ ಪುನರ್ವಸತಿ ಯೋಜನೆಗಳು ಪೂರ್ತಿಯಾಗದೆ ಬೃಹತ್ ಕೈಗಾರಿಕೆಗಳನ್ನು ತೆಗೆದುಕೊಂಡು ಬಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಸರವನ್ನು ಹಾಳು ಮಾಡುವಂಥದ್ದು ಮತ್ತು ಪುನರ್ವಸತಿಗೆ ತೊಂದರೆ ಕೊಡುವಂಥ ಕೆಲಸ ಸರ್ಕಾರದಿಂದ ಆಗುವುದಿಲ್ಲ ಎಂಬುದರ ಬಗ್ಗೆ ಒಂದು ಭರವಸೆಯನ್ನು ಕೊಡಬೇಕು. ಎರಡನೆಯದಾಗಿ ಇಮೊತ್ತು ನಮ್ಮ ಜಿಲ್ಲೆಯಲ್ಲಿ ಇಂಟರನ್ಯಾಷನಲ್

ಮಾರ್ಕೆಟನ್ನು ಕ್ಯಾಚ್ ಮಾಡುವಂಥ ಮೀನುಗಾರಿಕೆ ಉದ್ಯಮ ಏನಿದೆ, ಇದರ ಜೊತೆಗೆ ಅರಣ್ಯ ಉತ್ಪನ್ನಗಳು ಇಡೀ ಕರ್ನಾಟಕ ರಾಜ್ಯದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿಗುವಷ್ಟು ಎಲ್ಲಿಯೂ ಕೂಡ ಸಿಗುತ್ತಿಲ್ಲ, ಈ ಮೀನುಗಾರಿಕೆ ಮತ್ತು ಅರಣ್ಯ ಉತ್ಪನ್ನಗಳಿಗೆ ಸಂಬಂಧಪಟ್ಟಂಥ ಕೈಗಾರಿಕೆಗಳನ್ನು ಅಲ್ಲಿ ಸ್ಥಾಪಿಸಲಿಕ್ಕೆ ತಮ್ಮಲ್ಲಿ ಏನು ಯೋಜನೆಗಳು ಇವೆ? ಇನ್ನು ಮೂರನೆಯದಾಗಿ ದೊಡ್ಡ ದೊಡ್ಡ ಕಂಪನಿಗಳ ಪ್ರತಿನಿಧಿಗಳು ನಮ್ಮ ಜಿಲ್ಲೆಗೆ ಬಂದು ಹಾರಾಟ ಮಾಡಿ ಪರಿಶೀಲನೆ ಮಾಡುತ್ತಿದ್ದಾರೆ. ಇದರಿಂದ ಒಳ್ಳೆಯದಾಗುವುದಿದ್ದರೆ ನಮಗೆ ಸಂತೋಷ. ಆದರೆ ಇದರ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಜನ ಪ್ರತಿನಿಧಿಗಳಾದ ನಮಗೆ ಮತ್ತು ಇತರರಿಗೆ ಕೊಡಬೇಕೆಂದು ಹೇಳಿ ಈ ಮೂರು ಪ್ರಶ್ನೆಗಳು ತಮ್ಮ ಮುಂದೆ ಇಟ್ಟಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸಭಾಪತಿಯವರೇ, ಕಾಳಿ, ಕೊಡಸಳ್ಳಿ ಇಲ್ಲಿ ಪುನರ್ ವಸತಿ ಆಗಿಲ್ಲ ಎನ್ನುವುದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಸರ್ಕಾರ ಪ್ರಾಧಾನತೆ ಮೇಲೆ ಈ ಕೆಲಸವನ್ನು ಮಾಡುತ್ತಿದೆ. ಕೊಡಸಳ್ಳಿ ವಿಚಾರ ಹೇಳುವುದಾದರೆ ನಾವು ಈಗ ಸ್ಪೆ ಡಿಸ್ಟ್ರಿಬ್ಯೂಟ್ ಮಾಡಿದ್ದೇವೆ. ಅದನ್ನು ಲಿಫ್ಟ ಇರಿಗೇಷನ್ ಸ್ಕೀಮ್ಸ್ ಮಾಡಿದ್ದೇವೆ. ಕೊಡಸಳ್ಳಿ ಯಿಂದರೆ ಅಂಕೋಲ ತಾಲ್ಲೂಕಿನಲ್ಲಿ ಏನು ಬರುತ್ತದೆ ಆ ಏರಿಯಾವನ್ನು ಹೇಳುತ್ತಿದ್ದೇನೆ. ಸಮಸ್ಯೆ ಇ ಹುದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ರೀಹ್ಯಾಬಿಲಿಟೇಷನ್ ಆಗುವಾಗ ಯಾವ ಪ್ರ ಣದಲ್ಲಿ ಆಗಬೇಕು. ಅದರ ಬಗ್ಗೆ ಗಮನ ಕೊಡುತ್ತೇವೆ. ಇದರಲ್ಲಿ ಎಲ್ಲರನ್ನು ಸಮಾಧಾನ ಮಾಡ ದಕ್ಕೆ ಬಹಳ ಕಷ್ಟವಿದೆ. ಆದರೆ ಅಲ್ಲಿ ಪ್ರಾಮಾಣಿಕವಾದ ಪ್ರಯತ್ನ ನಡೆಯುತ್ತಿದೆ. ಇವತ್ತು ಕೈಗಾರಿಕೆ ಬಗ್ಗೆ ಹೇಳಬೇಕಾದರೆ, 1995-96ನೇ ಇಸವಿಯಲ್ಲಿ ಸರ್ಕಾರ ಯಾವುದೂ ದೊಡ್ಡ ಕೈಗಾರಿಕೆಯನ್ನು ನಾವು ನಮ್ಮ ಜಿಲ್ಲೆಯಲ್ಲಿ ಕ್ಲಿಯರ್ ಮಾಡಿಲ್ಲ. ಆದರೆ ಕೆಲವು ಫಾನ್ ಫಾರ್ಮಿಂಗ್ ಇಂಡಸ್ಟ್ರೀಸ್, ಫಿಷರೀಸಗೆ ಆರದುರ್ಗ 3 ಕೋಟಿ 10 ಲಕ್ಷ ರೂಪಾಯಿ. ಆರದುರ್ಗ ಅಕ್ವಾ ಪ್ರಾಡಕ್ಟಗೆ 1 ಕೋಟಿ 38 ಲಕ್ಷ, ಮುರುಡೇಶ್ವರ ಫುಡ್ ಅಂಡ್ ಎಕ್ಸಪೋರ್ಟ 350 ಲಕ್ಷ ರೂಪಾಯಿಯ ಇನವೆಸ್ಟ ಮಾಡಲಾಗಿದೆ. ಈ ಮೂರು ಕೈಗಾರಿಕೆ ಸಿಂಗಲ್ ವಿಂಡೋ ಏಜೆನ್ಸಿಯಲ್ಲಿ ಪ್ರಿನ್ಸಿಪಲ್ ಸೆಕ್ರೆಟರಿ ಹಂತದಲ್ಲಿ ಫ್ರಾನಕಲ್ಚರ್ ಎಂದು ಹೇಳಿ ಕ್ಲಿಯರ್ ಆಗಿದ್ದಾವೆ. ಪ್ರವಾಸೋದ್ಯಮ ಬೆಳೆಸುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನ ಈ ಸರ್ಕಾರದಲ್ಲಿ ನಡೆಯುತ್ತಿದೆ. ನಾನೇ ಎರಡು ದಿವಸದ ಹಿಂದೆ ಪ್ರವಾಸೋದ್ಯಮ ಬೆಳೆಸಬೇಕು ಎಂದು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೇನೆ. ಇನ್ನು ಪ್ರಪೋಸಲ್ಸ ನಮ್ಮ ಹತ್ತಿರ ಬಂದಿಲ್ಲ. ಆ ಪ್ರಪೋಸಲ್ಸ ಬಂದನಂತರ ಪ್ರವಾಸೋದ್ಯಮ, ಮೀನುಗಾರಿಕೆ, ಸಣ್ಣ ಕೈಗಾರಿಕೆ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದು ಆಗುವಾಗ ದೊಡ್ಡ ಕೈಗಾರಿಕೆಗೆ ಜಿಲ್ಲೆಯಲ್ಲಿ ಬರುವುದಿಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ತಮಗೆ ಏನು ಚಿಂತೆ ಇದೆ ಎನವಿರಾನಮೆಂಟ್, ಹಾಗೂ ಎಕಾಲಾಜಿ ಪ್ರೊಟೆಕ್ಟ ಆಗಬೇಕು. ಎಂದು, ಅದಕ್ಕೆ ಪ್ರಾಧ್ಯಾನತೆ ಕೊಡುತ್ತೇವೆ. ಎನವಿರಾನಮೆಂಟ್ ಹಾಗೂ ಎಕಾಲಾಜಿ ಜೊತೆ ನಾವು ಸಹಕರಿಸುತ್ತೇವೆ ಮತ್ತು ಯಾವುದೇ ಪರಿಣಾಮ ಜಿಲ್ಲೆಯ ಜನರ ಜೀವನದ ಮೇಲೆ ಆಗದೇ ಇರುವ ಹಾಗೆ ನಾವು ಕೆಲವು ಕೈಗಾರಿಕೆಯನ್ನು ತರುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ತಾವೂ ಸಹ ಎಲ್ಲರೂ ಸಹಕರಿಸಬೇಕು. ಏಕೆಂದರೆ ಯಾವಾಗಲೂ ಅವಕಾಶ ಬರುವುದಿಲ್ಲ. ಆ

ಅವಕಾಶ ಬಂದಾಗ ನಾವು ಆ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು ಎಂದು ವಿನಂತಿ ಮಾಡುತ್ತೇನೆ.

ಡಾ|| ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ನಮಗೆ ಉದ್ಯೋಗ ಹೆಚ್ಚು ಬರುವಂತಹ ರೀತಿಯ ಒಂದು ಯೋಜನೆ ಆಗಬೇಕಾಗಿದೆ. ಇವರು ದೊಡ್ಡ ಕೈಗಾರಿಕೆ ಎಂದು ಮಾಡಿಕೊಂಡು ಇದುವರೆಗೂ ಅಲ್ಲಿ ಪರಿಸರ ಹಾಳು ಮಾಡುವಂತಾದ್ದು, ಲೈನ್ ಹಾಕುವುದಕ್ಕೆ ಅರಣ್ಯ ಕಡಿಯುವಂತಾದ್ದು ನಡೆಯುತ್ತಿದೆ. ಮೊದಲು ಇದೇ ಭರವಸೆ ಕೊಟ್ಟಿರುವುದು. ನಮಗೆ ಸ್ಪಷ್ಟವಾದ ಭರವಸೆ ಎಂದರೆ ಜನ ಪ್ರತಿನಿಧಿಗಳ ಜೊತೆ ಚರ್ಚೆ ಮಾಡಿ ನಂತರ ಮಾಡಬೇಕು ಎಂದು ನನ್ನ ವಿನಂತಿ.

ಅಧ್ಯಕ್ಷರು : ಮುಂದೆ ಬರುವಂತಹ ಇಂಡಸ್ಟ್ರೀಸ್ ಎಲ್ಲಾ ಕೂಡ ಮ್ಯಾನ್ ಪವರ್‌ನ್ನು ಅಂಡರ್ ಲೈನ್ ಮಾಡಿ ಮೆಷಿನ್ ಪವರ್ ಮೇಲೆ ಡಿಪೆಂಡ್ ಆಗತಕ್ಕಂಥ ಇಂಡಸ್ಟ್ರೀಸ್‌ಗಳೇ ಬರುವುದು.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೈಗಾ ಪ್ರಾಜೆಕ್ಟ ಭೇಟಿ ಮಾಡಿಲ್ಲವೆಂದು ಕಾಣುತ್ತದೆ. ತಾವು ಭೇಟಿ ಕೊಟ್ಟರೆ ಅಲ್ಲಿ ಎಷ್ಟು ಫಾರೆಸ್ಟ ಟ್ರೀಗಳು ಹೋಗಿವೆ ಅದಕ್ಕೆ 10 times we have planted. If you want, I will arrange a visit. ತಾವೂ ಸಹ ತಿಳಿದುಕೊಳ್ಳಬೇಕು. ತಾವು ಜಿಲ್ಲೆಯ ಹಿರಿಯ ನಾಯಕರು, ತಾವು ಜಿಲ್ಲೆಯಲ್ಲಿ ಯಾವ ಪ್ರಕಾರ ಯಾವ ಇಲಾಖೆಯಿಂದ ಕ್ರಮ ತೆಗೆದುಕೊಂಡಿದೆ ಎಂಬುದನ್ನು ನೋಡಬೇಕಾಗುತ್ತದೆ. ನಾನು ಆ ಜಿಲ್ಲೆಯ ಜನರ ಜೀವನಕ್ಕೆ ಯಾವುದೇ ಪರಿಣಾಮ ಆಗದ ಹಾಗೆ ಕೈಗಾರಿಕೆ ಮಾಡಲು ನಿಮ್ಮೆಲ್ಲರ ಸಹಕಾರ ತೆಗೆದುಕೊಂಡು ಮಾಡುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಯುವಕರು ನಿರುದ್ಯೋಗದಿಂದ ಬಳಲಾಡುತ್ತಿದ್ದಾರೆ. ಅವರು ಉದ್ಯೋಗಕ್ಕಾಗಿ ಹೊರ ರಾಜ್ಯಗಳಿಗೆ ಹೋಗುತ್ತಿದ್ದಾರೆ. ಯುವಕರಿಗೆ ಸಿಗುವಂತಹ ಐ.ಆರ್.ಡಿ.ಪಿ ಇರಬಹುದು, ಅಥವಾ ಪ್ರಧಾನ ಮಂತ್ರಿಯವರ ರೋಜಗಾರ್ ಯೋಜನೆ ಇರಬಹುದು, ಬ್ಯಾಂಕಿನಿಂದ ಸಿಗುವಂತಹ ಸಾಲ ಸೌಲಭ್ಯಗಳು ಇರಬಹುದು, ಯಾವುದೇ ಸಾಲಗಳು ಸಿಗುತ್ತಿಲ್ಲ. ಆದುದರಿಂದ ಅದರ ಬಗ್ಗೆ ಸೂಕ್ತವಾದಂತಹ ಕ್ರಮವನ್ನು ಮಾನ್ಯ ಮಂತ್ರಿಗಳು ಗಮನ ಕೊಟ್ಟು ತೆಗೆದುಕೊಳ್ಳಬೇಕು ಮತ್ತು ಗುಡಿ ಕೈಗಾರಿಕೆಗಳಿಗೆ ಮತ್ತು ತೋಟಗಾರಿಕಾ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸದಸ್ಯರು ಹೇಳುವ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. As for as Prime Minister Rozgar is concerned or I.R.D.P is concerned today, North Karnataka is on the top. ಆದರೆ ತಾವು ಫಿಗರ್ಸ ನೋಡಿ. ಇಂಪ್ಲಿಮೆಂಟ್ ಯಾವ ಪ್ರಕಾರ ಮಾಡಿದ್ದೇವೆ. ಜನರಿಗೆ ಯಾವ ಪ್ರಕಾರ ಅನುಕೂಲ ಆಗಿದೆ ಎಂಬುದನ್ನು ನೋಡಿ ಇಲ್ಲಿ ರಾಜಕೀಯ ಭಾಷಣ ಮಾಡಬೇಕು ಎಂದರೆ ಮಾಡಬಹುದು. ಅದರ ಫಿಗರ್ಸ್ ಕಳುಹಿಸುತ್ತೇನೆ. ಗುಡಿ ಕೈಗಾರಿಕೆ,

ಸಣ್ಣ ಕೈಗಾರಿಕೆ ಬೆಳೆಯಬೇಕೆಂದು ಖಾದಿ ಬೋರ್ಡ್ ಮುಖಾಂತರ 72ಕೋಟಿ ರೂಪಾಯಿ ಸಾಲವನ್ನು ಇವತ್ತು ಕೇಂದ್ರಸರ್ಕಾರದ ಸಹಾಯದಿಂದ ಕೊಡುತ್ತಿದ್ದೇವೆ. ಪ್ರತಿಯೊಂದು ಜಿಲ್ಲೆಗೆ 2-3-5 ಕೋಟಿ ರೂಪಾಯಿಯವರೆಗೆ ಕೊಟ್ಟಿದ್ದೇವೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಇವತ್ತು ಸೆಮಿನಾರ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಏಕೆಂದರೆ ಸಣ್ಣ ಕೈಗಾರಿಕೆ, ಗುಡಿ ಕೈಗಾರಿಕೆ ಗ್ರಾಮಾಂತರ ಪ್ರದೇಶದಲ್ಲಿ ಬೆಳೆಯಬೇಕು, ಉದ್ಯೋಗವಕಾಶ ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಈ ಪ್ರಯತ್ನ ಮಾಡುತ್ತಿದ್ದೇನೆ. ತಾವು ಸಲಹೆ ಕೊಟ್ಟರೆ ಅದನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ. ಆದರೆ ತಾವು ದೊಡ್ಡ ಕೈಗಾರಿಕೆ, ಮಧ್ಯಮ ಕೈಗಾರಿಕೆ ಯಾವುದು ಬರಬಾರದು ಎಂದು ಹೇಳಿದರೆ ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗರೀಕರ ಸಮಿತಿ ರಚನೆ.

30 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬೃಹತ್ ಕೈಗಾರಿಕೆಗಳ ಬಗ್ಗೆ ನಿರ್ಧರಿಸಲು ನಾಗರೀಕರ ಸಮಿತಿಯನ್ನು ರಚಿಸಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣವೇನು?

ಆ) ಈ ಬಗ್ಗೆ ಸರ್ಕಾರ ಆದೇಶವೇನಾದರೂ ಹೊರಡಿಸಿದೆಯೇ ಹೊರಡಿಸಿದ್ದಲ್ಲಿ ವಿವರ ನೀಡುವುದು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಈ ರೀತಿ ಒಂದು ನಾಗರೀಕ ಸಮಿತಿಯನ್ನು ರಚಿಸಲು ಸರ್ಕಾರವು ಉದ್ದೇಶಿಸಿದ್ದು, ಈ ಬಗ್ಗೆ ಆದೇಶವನ್ನು ಸದ್ಯದಲ್ಲಿಯೇ ಹೊರಡಿಸಲಾಗುವುದು.

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರ ಒದಗಿಸಲಾಗಿದೆ. ಆ ಉತ್ತರ ಕೊಡುವಾಗ ಸಿಟಿಜನ್ ಕಮಿಟಿ ಫಾರಂ ಆಗಿರಲಿಲ್ಲ. ಈ ಕಮಿಟಿ ಈಗ ರಚನೆಯಾಗಿದ್ದು ನಾವು ಸರ್ಕಾರದಿಂದ ಆದೇಶ ಹೊರಡಿಸಿದ್ದೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಈ ನಾಗರೀಕ ಸಮಿತಿಯನ್ನು ನೇಮಕ ಮಾಡುವ ಉದ್ದೇಶ ಎಂ.ಆರ್.ಪಿ.ಎಲ್ ಕೊಳವೆ ಬಾವಿ ಹಾಕುವಾಗ ಸ್ಥಳೀಯರು ಮತ್ತು ಸರ್ಕಾರದ ಮಧ್ಯೆ ಪರಸ್ಪರ ಅರಿವು ಇಲ್ಲದೆ ಕೊನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಶಾಸಕರು ಮತ್ತು ಸ್ಥಳೀಯ ಮೀನುಗಾರರು ಮುಖಂಡರ ಸಭೆಯಲ್ಲಿ ನಾವು ಚರ್ಚೆ ಮಾಡಿದ್ದೇವೆ. ಇನ್ನು ಮುಂದೆ ಯಾವುದೇ ಕೈಗಾರಿಕೆಗೆ ಪರವಾನಗಿ ಕೊಡುವ ಮುನ್ನ ಈ ಸಮಿತಿಯ ಅಭಿಪ್ರಾಯ ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಗಿದೆ. ದಿ|| 29.12.85ಕ್ಕೆ ಸರ್ಕಾರಿ ಆದೇಶ ಪ್ರಕಾರ ಈ ಸಮಿತಿ ರಚನೆ ಮಾಡಬೇಕು ಎಂದು ಕೂಡ ಸರ್ಕಾರ ಆದೇಶ ಮಾಡಿದ್ದಲ್ಲದೆ ಇದೇ ಆದೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಧಾರಣ ಶಕ್ತಿ ಕ್ಯಾರಿಯಿಂಗ್ ಕೆಪಾಸಿಟಿಯನ್ನು ಅಧ್ಯಯನ ಮಾಡದೇ ಮುಂದಿನ ಬೃಹತ್ ಕೈಗಾರಿಕೆಗಳಿಗೆ ಪರವಾನಗಿ ನೀಡುವುದಿಲ್ಲ ಎಂದು ಸರ್ಕಾರ 29.12.95ಕ್ಕೆ ಸರ್ಕಾರಿ ಆದೇಶ ಮಾಡಿದ್ದರೂ ಕೂಡ